Regd No BG 155 23-9-1969

SATYAVADI

Daily

MYSORE 4

53 rd Year of Publication

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ನ್ಯೆಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು: ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ನ್ಯೆಸೆ

ಪ್ರಾಜಕ್ಟುಗಳಿಗೆ ಬ್ಯಾಂಕುಗಳು ಸಹಾಯ ಮಾಡಲಿ

ಪಾಕಿಸ್ಥಾನದಲ್ಲಿ ಚುನಾವಣೆ

ನವದೆಹಲಿ— ಪಾಕಿಸ್ಥಾನದಲ್ಲಿ ಪ್ರಥಮ ಸಾರ್ವಜನಿಕ ಚುನಾವಣೆಗೆ 6 ಕೋಟಿ ವೋಟರುಗಳನ್ನು ಪಟ್ಟಿಯಲ್ಲಿ ಸೇರಿಸಲಾಗಿದೆ – ಅಲ್ಲಿಯ ಒಟ್ಟು ಜನಸಂಖ್ಯೆ 12 ಕೋಟಿಗೂ ಹೆಚ್ಚು – ಚುನಾವಣೆ ಮುಂದಿನ ವರ್ಷ ಕಡೆಯೊಳಗೆ ಸಾಧ್ಯವಾದಷ್ಟು ಬೇಗ ನಡೆಸಲಾಗಲಿದೆ

"ಸತ್ಯವಾದಿ" ಯ ಸ್ವರ್ಣೋತ್ಸವ

28–9–1969 ಭಾನುವಾರ
ಬೆಳಿಗ್ಗೆ 10 ಗಂಟೆಗೆ
ಮೈಸೂರು 4, ಚಾಮರಾಜಪುರಂನಲ್ಲಿನ
'ಸತ್ಯವಾದಿ' ಆಫೀಸಿನಲ್ಲಿ

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಪತ್ರ ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶಿನ್ಯಾ ವರರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ॥ ಎಂ.ಸಿ.ಮೋದಿಯವರು ಡಾ ॥ ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಕೃತಜ್ಞತಾಪೂರ್ವಕ ವಂದಿಸುತ್ತೇವೆ.

ದೇಸ್ಯಾರ ಉಪವಾಸ ಸತ್ಯಾಗ್ರಹ

ಅಹಮದಾಬಾದು— ಬಾಪು ಇಲ್ಲಿ 2 ದಶಕಗಳದ್ದು ವಿಶ್ವಕ್ಕೆ ತಮ್ಮ ಶಾಂತಿ ಸಂದೇಶ ಸಾರಿವ ಸ್ಥಳವಿದು : ಇಲ್ಲಿ ಹಿಂಸಾಕೃತ್ಯ ನಡೆಯುವುದನ್ನು ಸಹಿಸಲಾರೆನು : ಆಮರಣಾಂತ ಉಪವಾಸ ಕೈಗೊಳ್ಳಲಿದ್ದೇನೆ ಎಂದು ಮೊರಾರ್ಜಿ ದೇಸಾಯರು ಅಖಿಲ ಭಾರತ ರೇಡಿಯೋದಲ್ಲಿ ತಿಳಿಸಿದರು – ಮಹಾತ್ಮಾ ಗಾಂಧಿಯವರು ಸ್ಥಾಪಿಸಿದ ಗುಜರಾತು ವಿದ್ಯಾಪೀಠದಲ್ಲಿ ಅನಿರ್ದಿಷ್ಟ ಕಾಲ ಉಪವಾಸ ಪ್ರಾರಂಭಿಸಿದರು.

●

ಅಹಮದಾಬಾದು ಪರಿಸ್ಥಿತಿ

ಅಹಮದಾಬಾದು — ಊರಿನ ಪೂರ್ಣ ಆಡಳಿತವು ಸೈನ್ಯದ ವಶದಲ್ಲಿದೆ – ನಿನ್ನೆ ಪರಿಸ್ಥಿತಿ ಸ್ವಲ್ಪ ಉತ್ತಮಗೊಂಡಿತೆಂದು ಹೇಳಲಾಗಿದೆ : 24 ಗಂಟೆ ಕರ್ಫ್ಯೂ ಜಾರಿಯಲ್ಲಿದೆ – ಮೊರಾರ್ಜಿ ದೇಸಾಯರು ವಾಸಿಸುತ್ತಿರುವ ಗುಜರಾತುಪೀಠದ ಹತ್ತಿರ 1 ಸಾರಿಯೂ ಮತ್ತಿತರ ಕಡೆ 4 ಸಾರಿಯೂ ಗುಂಡು ಹಾರಿಸಲಾಯಿತು - 35 ಅಗ್ನಿಸ್ಪರ್ಶಗಳೂ 2 ತಿವಿತವೂ ನಡೆದುದಾಗಿ ಹೇಳಲಾಗಿದೆ – 5 ದಿನಗಳ ಗಲಭೆಯಲ್ಲಿ ಸುಮಾರು 350 ಮುಂದಿ ಸತ್ತು 700 ಮಂದಿ ಗಾಯಗೊಂಡಿರುವದಾಗಿ ಹೇಳಲಾಗಿದೆ – ಕರ್ಫ್ಯೂ ಉಲ್ಲಂಘಿಸಿದ 300 ಮಂದಿ ಸೇರಿ 2200 ದಸ್ಕಗಿರಿಗಳಾಗಿದೆ.

○

ಪ್ರಾಜಕ್ಟುಗಳಿಗೆ ಬ್ಯಾಂಕು ನೆರವು

ಬೆಂಗಳೂರು— ರಾಜ್ಯದಲ್ಲಿನ ರಾಷ್ಟ್ರೀಕರಣವಾದ ಬ್ಯಾಂಕುಗಳೂ ವಾಣಿಜ್ಯ ಬ್ಯಾಂಕುಗಳೂ ಹಿರಿಯ-ನೀರಾವರಿ ಕಾರ್ಯಗಳಿಗೆ ನೆರವು ನೀಡಲು ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಒತ್ತಾಯ ಮಾಡಿದರು.

○

ವಿದೇಶೀ ವ್ಯಾಪಾರಿಗಳ ಉಚ್ಚಾಟನೆ

ತ್ರಿಪೋಲಿ— ಲಿಬಿಯಾದಲ್ಲಿ ವಿದೇಶೀ ವಾಣಿಜ್ಯೋದ್ಯಮ ಪ್ರತಿಬಂಧಿಸಲ್ಪಟ್ಟು ಎಲ್ಲಾ ವಿದೇಶೀಯರ ಮಾಲೀಕತ್ವದ ವಾಣಿಜ್ಯ ಸಂಸ್ಥೆಗಳನ್ನು ಮುಚ್ಚಲು ಆಜ್ಞಾಪಿಸಲಾಗಿದೆ.

★

ಘರ್ಷಣೆ

ಲೂದಿಯಾನಾ— ಪ್ರದರ್ಶನ ನಡೆಸುತ್ತಿರು ವಿದ್ಯಾರ್ಥಿಗಳಿಗೂ ಪೋಲೀಸರಿಗೂ ಆದ ಘರ್ಷಣೆಯಲ್ಲಿ 12 ಮಂದಿ ಗಾಯಗೊಂಡರು.

★

1000 ರಾತ್ರಿ ಶಾಲೆಗಳು

ಕೋಲಾರ— ವಯಸ್ಕರ ಶಿಕ್ಷಣ ಸಮಿತಿಯು ಈ ವರ್ಷ ರೂ 140000 ಖರ್ಚಿನಲ್ಲಿ 1000 ರಾತ್ರಿಶಾಲೆಗಳನ್ನು, ಗಾಂಧಿ ಶತಮಾನೋತ್ಸವ ಗುರುತಾಗಿ ಸ್ಥಾಪಿಸುವ ಕಾರ್ಯಕ್ರಮ ಹೊಂದಿದೆ.

●

ಎಲ್ ಐ ಸಿ

ಬೊಂಬಾಯಿ— ಪಾಲಿಸಿದ್ದಾರರ ಕುಂಕೊರತೆ ಕೇಳಿ ಪರಿಹರಿಸಲು ಜೀವ ವಿಮಾ ಸಂಸ್ಥೆಯು ಶಾಖಾ ವಿಭಾಗ ವಲಯ ಮಟ್ಟದಲ್ಲಿ ಇಲಾಖೆಗಳನ್ನು ಸ್ಥಾಪಿಸಿದೆ.

★

ಕಾಂಗ್ರೆಸ್ಸನ್ನು ಅಧಿಕಾರದಿಂದ ತೆಗೆಯಲು

ಬೆಂಗಳೂರು— ಎಸ್ಸೆಸ್ಪಿಯು ಎವಿರೋಧ ಪಕ್ಷಗಳೊಡನೆ ಸೇರಿ ಕಾಂಗ್ರೆಸ್ಸನ್ನು ಅಧಿಕಾರದಿಂದ ತೆಗೆಯಲಚ್ಚಿಸುತ್ತದೆಂದು ಅಖಿಲ ಭಾರತದ ಆ ಪಾರ್ಟಿ ಕಾರ್ಯದರ್ಶಿಯವರು ಹೇಳಿದರು.

ಹಾಲು ವಿಷ ಮಿಶ್ರ

ಅಹಮದಾಬಾದು— ಇಲ್ಲಿಯ ಮುನಿಸಿಪಲ್ ಡೈರಿ ಸರಬರಾಜು ಮಾಡುವ ಹಾಲು ವಿಷ ಮಿಶ್ರವೆಂದೂ ಅದನ್ನು ಕುಡಿದು ಕೆಲವು ಮಕ್ಕಳು ಸತ್ತವೆಂದೂ ವದಂತಿ ಹರಡಿಸಲಾಗಿತ್ತು – ಕೂಡಲೇ ಆಹಾಲನ್ನು ಸೇವಿಸದಿರಲು ರೇಡಿಯೋ ಮೂಲಕ ಪ್ರಸಾರ ಮಾಡಲಾಯಿತು - ಹಾಲು ಪರೀಕ್ಷಿಸಲ್ಪಟ್ಟು ನಂತರ ಹಾಲು ಸರಿಯಾಗಿದೆ ಸೇವಿಸಬಹುದೆಂದು ರೇಡಿಯೋ ಮೂಲಕ ಸಾರಲಾಯಿತು

★

ನಾಯಕತ್ವ ಬದಲಾವಣೆ

ನವದೆಹಲಿ— ಆಂಧ್ರ ಪ್ರದೇಶದಲ್ಲಿನ ಶಾಸನಸಭಾ ಕಾಂಗ್ರೆಸ್ಸು ಪಕ್ಷದ ನಾಯಕತ್ವದಲ್ಲಿ ಬದಲಾವಣೆಯಾಗಬೇಕೆಂದು ಕಾಂಗ್ರೆಸ್ ಅಧ್ಯಕ್ಷ ನಿಜಲಿಂಗಪ್ಪನವರು ಹೇಳಿದರು.

★

ಕಾನಸ್ಟಬಲಿಗೆ ಶಿಕ್ಷೆ

ಬಳ್ಳಾರಿ— ಯಲ್ಲಪ್ಪ ಎಂಬುವನನ್ನು ಮಾರ್ಚಿ 13 ರಂದು ಹೆಂಡದಂಗಡಿ ಹತ್ತಿರ ಮೂತ್ರಕೋಶದ ಮೇಲೆ ಒದ್ದು ಕೊಂದುದಕ್ಕಾಗಿ ಸಾರಂಗಪಾಣಿ ಎಂಬ ಪೋಲೀಸರವನಿಗೆ 3 ವರ್ಷ ಕಠಿಣ ಸಜೆ ವಿಧಿಸಲಾಯಿತು.

○

ಘರ್ಷಣೆ

ಕಲ್ಕತ್ತ— ಆಲಿಪುರದಲ್ಲಿ ಭೀಕರ ವಿದ್ಯಾರ್ಥಿ ಗುಂಪಿನ ಮೇಲೆ ನಿನ್ನೆ ಪೋಲೀಸರು ಗುಂಡುಹಾರಿಸಿದರು – ಅಂಗಡಿ ಸಂಸ್ಥೆಗಳು ಮುಚ್ಚಲಾಗಿದೆ - ಸೆಕ್ಷನ್ 144 ಜಾರಿ ಮಾಡಲಾಗಿದೆ

ಹೊಡೆದಾಟ

ಅನಂತಪುರ— ಲಾರಿ ಡ್ರೈವರುಗಳಿಗೂ ಒಂದು ಸ್ಥಳೀಯ ಸಿನಿಮಾ ನೌಕರರಿಗೂ ಟಿಕೇಟು ಕೊಡುವ ವಿಷಯದಲ್ಲಿ ಹೊಡೆದಾಟವಾಗಿ 11 ಜನ ಗಾಯಗೊಂಡರು.

ಮನನಾರ್ಹ ವಿಷಯ

ಮನುಷ್ಯನು ತನಗೂ ಇತರನಿಗೂ ಬೇಕಾದವನೂ ಬೇಡವಾದವನೂ ಆಗಿದಾ
ನೆ ; ಏಕೆಂದರೆ ತನ್ನನ್ನು ಪ್ರೀತಿಸುವವನೂ ದ್ವೇಷಿಸುವವನೂ ಲೋಕದಲ್ಲಿದ್ದಾರೆ.

Quality Printing — Neat Binding

Lakshminarasimha Press

Sivarampet, Mysore

ವುಡ್‌ಲ್ಯಾಂಡ್ ಜಯಪ್ರದ 3ನೇ ವಾರ

— ಅತ್ಯಾಕರ್ಷಣೀಯ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ —

ಸಾಜನ್ SAAJAN

ನಟವರ್ಗ— ಮನೋಜ್‌ಕುಮಾರ್, ಆಶಾ ಪರಾಖ್, ಓಂ ಪ್ರಕಾಶ್
ಮದನಪುರಿ, ಶಬ್ನಮ್

ನಿರ್ದೇಶನ : ಮೋಹನ್ ಸೇಗಾಲ್ ಸಂಗೀತ : ಲಕ್ಷ್ಮೀಕಾಂತ ಪ್ಯಾರೇಲಾಲ್

[ದಿನ 3 ಪ್ರದರ್ಶನಗಳು]

ಆಪೆರಾ— ಅನೋಖ 3ನೆ ವಾರ

ಚಿತ್ತಾಕರ್ಷ ಈಸ್ಟ್‌ಮೆ ಕಲರ್ ಹಿಂದಿ ಚಿತ್ರ

ಮುಹಲ್

ತಾರೆ— ದೇವಾನಂದ್, ಆಶಾ ಪರಾಖ್, ಅಭಿ ಭಟ್ಟಾಚಾರ್ಯ
ಡೇವಿಡ್, ಅಜ್ರಾ, ಸುಧೀರ್

ದಿಗ್ದರ್ಶನ— ಶೇಖರ್ ಮುಖರ್ಜಿ ಸಂಗೀತ— ಕಲ್ಯಾಣ್‌ಜಿ ಆನಂದ್‌ಜಿ

ದಿನ 3 ಆಟಗಳು

Golden Jubilee of 'Satyavadi'

Sunday 28 –9– 1969

at 'Satyavadi' office Chamarajapuram, Mysore 4.

The President, the Prime Minister, H H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, sri M. B. Basaviah Sri Madhav Shenoi Sri Opera Talkies. Padmabhushana Dr. M.C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It iswelknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 4.

ದೇವರ ಮೇಲಿನ ನಂಬಿಕೆ

ದೇವರ ಮೇಲಿನ ನಂಬಿಕೆಯಿಂದ ಎಂಥಾ ಅಗಾಧ, ಅಸಾಧ್ಯ ಕೆಲಸ ಮಾಡಬಹುದೆಂಬುದನ್ನು ಷೋಲಾಪುರದ ಪಾಂಡೆ ಗ್ರಾಮದ ಓರ್ವ 'ಬಲಭೀಮ" ಪ್ರದರ್ಶಿಸುತ್ತಿದಾನೆ. ಪ್ರತಿ ವರ್ಷವೂ ಆಶ್ವಿಜಪೂರ್ಣಿಮೆ ದಿನ ನಡೆಯುವ ಈ ಅತ್ಯಾಶ್ಚರ್ಯಕರ ಘಟನೆ ಈ ವರ್ಷ ಸೆಪ್ಟಂಬರ್ 25 ರಂದು ನಡೆಯುವುದು. 12 ಗಾಡಿಗಳನ್ನು ಒಂದರ ಹಿಂದೊಂದರಂತೆ ಕಟ್ಟಿ ಅವುಗಳ ಮೇಲೆ 60 ಜನ ನಿಲ್ಲುವರು. 'ಬಲಭೀಮು" ನನ್ನು ಅದರ ಮುಂದುಗಡೆ ಕಟ್ಟುವರು. ಅವನು ಒಂದು ಫರ್ಲಾಂಗಿನಷ್ಟು ಹೂರ ನಿರಾಯಾಸವಾಗಿ ಎಳೆದುಕೊಂಡು ಹೋಗುವನು. ಈತನು ಅಲ್ಲಿಯ ದೇವಾಲಯದಲ್ಲಿನ ದೇವತೆ ಶ್ರೀ ಜಗದಾಂಬಾ ದೇವಿಯ ಪರಮ ಭಕ್ತನು. ಈ ಸಾಹಸವು ಆ ದೇವತೆಯ ಮೇಲಿನ ಅವನ ನಂಬಿಕೆ ಫಲವೆಂದು ಹೇಳಲಾಗುತ್ತಿದೆ. ಸಾಧಾರಣವಾಗಿ ಇಪ್ಪತ್ತನ್ನು ಎಳೆಯಲು 24 ಎತ್ತುಗಳು ಬೇಕು. ಈ ಸಾಹಸ ಪ್ರದರ್ಶನಕ್ಕೆ ಮುಂಚೆ ಆತನು ಆ ದೇವಿಯ ದೇವಸ್ಥಾನಕ್ಕೆ ಮೆರವಣಿಗೆಯಲ್ಲಿ ಕರೆದುಕೊಂಡು ಹೋಗುವರು. ಅಲ್ಲಿ ಅವನ ಪ್ರಾರ್ಥನಾನಂತರ ಗಾಡಿಗೆ ಕಟ್ಟುವರು. ಕಾರ್ಯವು ಸುಲಲಿತವಾಗಿ ನಡೆಯುವುದು.

★

ಚಿಕ್ಕ ಗಳ ದುರುಪಯೋಗ

ಮದರಾಸು— ಅಮೇರಿಕಾದ ಉದಾರಿಗಳು, ಮಿಷನರಿಗಳಿಗೆ ಮತ್ತಿತರರಿಗೆ ಕಳುಹಿಸುತ್ತಿರುವ ವಿದೇಶೀ ಚಿಕ್ಕ ಗಳನ್ನು ವಿದೇಶೀ ವಿನಿಮಯ ನಿಬಂಧನೆಗಳನ್ನುಲ್ಲಂಘಿಸಿ "ವಾಸಾರ" ನಡೆಸಲಾಗುತ್ತಿರುವದು ಪತ್ತೆಯಾಗಿದೆ – ಮದ್ರಾಸಿನಲ್ಲಿಯ ಒಬ್ಬ ಮಿಷನರಿ, ಕೊಟ್ಟಯಂನಲ್ಲಿನ ಒಬ್ಬ ಮಿಷನರಿ ಬಂಧಿಸಲ್ಪಟ್ಟಿದ್ದಾರೆ.

★

ಮನುಷ್ಯನಿಂದ ಒಳ್ಳೆಯದಾದರೂ ಕೆಟ್ಟದಾದರೂ ಉಂಟಾಗಿರೆ ಅದಕ್ಕೆ ಅವನಿಗಿರುವ ಸಂಗವೇ ಕಾರಣವಾಗುತ್ತದೆ.

Help The Gorakshana



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಿಗಾಗಿ ನಡೆಯಲಿ
ಗೋರಕ್ಷಣೆಗೆ ಬೆಂಬಲ ನೀಡಿ

Protect the Cow

SHAKTI SUDHA

A Superb Tonic